ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು,

ಕುಮಟಾ.

ಸಿಸಿ ನಂ. 196/2022

| ಫಿರ್ಯಾದಿ | | ಆರೋಪಿ |
|---|---|---|
| ಶ್ರೀ ಗೋದಾವರಿ ಸೌಹಾರ್ದ ಕ್ರೆಡಿಟ್ ಸಹಕಾರಿ ಲಿಮಿಟೆಡ್ ಗೋಕರ್ಣ, ಶಾಖೆ ಕುಮಟಾ. | ವಿರುದ್ಧ | ಪ್ರದೀಪ ನಾಗೇಶ ಅಂಬಿಗ |

ಆರೋಪಿಃ

ಪ್ರದೀಪ ನಾಗೇಶ ಅಂಬಿಗ ,

32 ವರ್ಷ , ಸಾಃ ಜನತಾ ಕಾಲೋನಿ, ದಿವಗಿ, ತಾಃ ಕುಮಟಾ.

– ದಂಡ ಪಕ್ರಿಯಾ ಸಂಹಿತೆ ಕಲಂ.251 ರಡಿ ಆಪಾದನೆ –

ನೀವು ಫಿರ್ಯಾದುದಾರ ಸಹಕಾರಿಯಿಂದ ರೂ. 50,000/– ಸಾಲವನ್ನು ಪಡೆದಿದ್ದು, ಸದರಿ ಸಾಲವು ಕಟ್ ಬಾಕಿಯಾಗಿರುವುದರಿಂದ ನೀವು ಅದರ ತೀರುವಳಿಯ ಸಲುವಾಗಿ ಫಿರ್ಯಾದುದಾರ ಸಹಕಾರಿಗೆ ಯುನಿಯನ್ ಬ್ಯಾಂಕ್, ಕುಮಟಾ ಶಾಖೆಯ ಚೆಕ್ ನಂ. 068825 ರೂ. 44,922/– ದಿಃ 09–02–2022 ನೇ ಚೆಕ್ ನ್ನು ನೀಡಿದ್ದು, ಸದರಿ ಚೆಕ್ ನ್ನು ನಗದೀಕರಿಸಲು ಅವರ ಬ್ಯಾಂಕರರಾದ ಕುಮಟಾ ಶಾಖೆಯ ಕೆ ಡಿ ಸಿ ಸಿ ಬ್ಯಾಂಕ್‌ಗೆ ಹಾಜರು ಪಡಿಸಿದಾಗ ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣವಿಲ್ಲ ಎಂಬ ಹಿಂಬರಹದೊಂದಿಗೆ ವಾಪಸ್ಸು ಬಂದಿದ್ದು, ಈ ಕುರಿತು ನಿಮಗೆ ದಿಃ 17–03–2022 ರಂದು ಅವರ ವಕೀಲರ ಮುಖಾಂತರ ನೋಂದಾಯಿತ ಅಂಚೆ ನೋಟಿಸು ನೀಡಿದ್ದು, ಸದ್ರಿ ನೋಟಿಸು ನಿಮಗೆ ದಿಃ 29–03–2022 ರಂದು ಜಾರಿಯಾಗಿದ್ದರೂ ಸಹ ನೀವು ಚೆಕ್ ನಲ್ಲಿ ಹೇಳಿದ ಹಣವನ್ನು ವಾಪಸ್ಸು ಕೊಡದೇ ಕಲಂ 138 ಎನ್ ಐ ಆ್ಯಕ್ಟ ನೇದರ ಪ್ರಕಾರ ಅಪರಾಧ ಮಾಡಿರುತ್ತೀರೆಂದು ನಿಮ್ಮ ಮೇಲೆ ಆಪಾದನೆ ಇದೆ, ಅದಕ್ಕೆ ಏನು ಹೇಳುತ್ತೀರಿ?

**ಪ್ರಶ್ನೆ – 1** ನಿಮ್ಮ ಮೇಲೆ ಹೊರಿಸಲಾದ ಆಪಾದನೆಯನ್ನು ಕೇಳಿದಿರಾ? ಅದು ನಿಮಗೆ ತಿಳಿಯಿತೇ?

ಉತ್ತರ –

**ಪ್ರಶ್ನೆ – 2** ನಿಮ್ಮ ಮೇಲೆ ಹೊರಿಸಲಾದ ಆಪಾದನೆಯನ್ನು ಒಪ್ಪಿಕೊಳ್ಳುತ್ತೀರಾ? ಅಥವಾ ಪ್ರತಿ ರಕ್ಷೆ ಇದೆಯೆ?

ಉತ್ತರ –

ಆರೋಪಿಯ ಹೇಳಿಕೆಯನ್ನು ನನ್ನ ಸಮಕ್ಷಮ ಬಹಿರಂಗ ನ್ಯಾಯಾಲಯದಲ್ಲಿ ಪಡೆದುಕೊಳ್ಳಲಾಯಿತು. ಇದರಲ್ಲಿನ ಎಲ್ಲ ಅಂಶಗಳನ್ನು ಈ ಕಡತವು ಪೂರ್ಣವಾಗಿ ಒಳಗೊಂಡಿರುತ್ತದೆ.

ಸ್ಥಳಃ ಕುಮಟಾ
ದಿಃ 21-12-2022.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾ.ದಂ., ಕುಮಟಾ